ಬೆವಿಕಂ
BESCOM
# ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ
*(ಕರ್ನಾಟಕ ಸರ್ಕಾರದ ಸಂಪೂರ್ಣ ಸ್ವಾಮ್ಯಕ್ಕೆ ಒಳಪಟ್ಟಿರುತ್ತದೆ)*

ಸಂಖ್ಯೆ : ಬೆ.ವಿ.ಕಂ/ಪ್ರ.ವ್ಯ/ಉ.ಪ್ರ.ವ್ಯ/ಸ.ಪ್ರ.ವ್ಯ/ಬಿಸಿ-51/2015-16/ಸಿ.ವೈ.ಎಸ್-90
ಲಗತು :
ದೂರವಾಣಿ:080-22341199

ಪ್ರಧಾನ ವ್ಯವಸ್ಥಾಪಕರು (ವಿ),
ಡಿ.ಎಸ್.ಎಂ, ನಿಗಮ ಕಾರ್ಯಾಲಯ,
ಬೆವಿಕಂ, ಕೆ.ಆರ್.ವೃತ್ತ,
ಬೆಂಗಳೂರು - 560 001.
ದಿನಾಂಕ: 28-03-2016

ಗೆ,
ಎಲ್ಲಾ ಕಾರ್ಯನಿರ್ವಾಹಕ ಇಂಜಿನಿಯರ್(ವಿ),
ಕಾ&ಪಾ ವಿಭಾಗ, ಬೆಂ.ಮ.ಕ್ಷೇ.ವ/ ಬೆಂ.ಗ್ರಾ.ವ/
ಚಿತ್ರದುರ್ಗ ವಲಯ, ಬೆವಿಕಂ

## ಸುತ್ತೋಲೆ

ಮಾನ್ಯರೇ,

**ವಿಷಯ:** ಕಟ್ಟಡಗಳ ಮೇಲ್ಛಾವಣಿ ಮೇಲೆ ಗ್ರಿಡ್ ಸಂಪರ್ಕಿತ ಸೌರಶಕ್ತಿ ಉತ್ಪಾದನಾ ಘಟಕಗಳಿಗೆ ಮಾನದಂಡನೆಗಳ ಬಗ್ಗೆ.

**ಉಲ್ಲೇಖ:** ಸರ್ಕಾರಿ ಆದೇಶ ಸಂಖ್ಯೆ: ಇಎನ್ 70 ವಿಎಸ್‌ಸಿ 2015, ಬೆಂಗಳೂರು, ದಿನಾಂಕ: 28.03.2016

****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಸೌರ ಶಕ್ತಿ ಮೇಲ್ಛಾವಣಿ ಘಟಕಗಳನ್ನು ಸ್ಥಾಪಿಸಲು ಮಾರ್ಪಡಿಸಿದ ಮಾರ್ಗಸೂಚಿಗಳನ್ನು ಉಲ್ಲೇಖಿತ ಪತ್ರದಲ್ಲಿ ಕರ್ನಾಟಕ ಸರ್ಕಾರವು ಹೊರಡಿಸಿದ್ದು, (ಪತ್ರ ಲಗತ್ತಿಸಿದೆ) ಅವುಗಳನ್ನು ತಕ್ಷಣದಿಂದಲೇ ಜಾರಿಗೆಬರುವಂತೆ ಪಾಲಿಸಲು ಸೂಚಿಸುವಂತೆ ನಿರ್ದೇಶಿತನಾಗಿದ್ದೇನೆ.

**ಅನುಸರಿಸಬೇಕಾದ ಮಾರ್ಗಸೂಚಿಗಳು ಈ ಕೆಳಕಂಡಂತಿವೆ:**

1. ಗ್ರಿಡ್ ಸಮಪರ್ಕಿತ ಮೇಲ್ಛಾವಣಿ ವಿದ್ಯುತ್ ಉತ್ಪಾದನೆಗೆ ನಿವ್ವಳ ಮಾಪನ ವ್ಯವಸ್ಥೆಯಡಿ ಕರ್ನಾಟಕ ವಿದ್ಯುತ್ಛಕ್ತಿ ನಿಯಂತ್ರಣ ಆಯೋಗದವರು ನಿಗದಿ ಪಡಿಸಿರುವ ವಿದ್ಯುತ್ ದರವನ್ನು ಪಾವತಿಸಲಾಗುತ್ತದೆ.

2. ಗೃಹಬಳಕೆ ವಿದ್ಯುತ್ ಸ್ಥಾವರಗಳ ಕಟ್ಟಡಗಳನ್ನು ಹೊರತು ಪಡಿಸಿ, ಈಗಾಗಲೇ ಒಡಂಬಡಿಕೆ ಮಾಡಿಕೊಂಡಿರುವ ಮತ್ತು ಮುಂದೆ ಒಡಂಬಡಿಕೆ ಮಾಡಿಕೊಳ್ಳುವ, ಎಲ್ಲಾ ವಿದ್ಯುತ್ ಸ್ಥಾವರಗಳ ಕಟ್ಟಡಗಳ ಎತ್ತರ ಕಡ್ಡಾಯವಾಗಿ 10 ಅಡಿಗಿಂತ ಕಡಿಮೆಯಾಗಿರಬಾರದು ಮತ್ತು ಗೃಹಬಳಕೆ ವಿದ್ಯುತ್ ಸ್ಥಾವರಗಳನ್ನೊಳಗೊಂಡಂತೆ, ಎಲ್ಲಾ ವಿದ್ಯುತ್ ಸ್ಥಾವರಗಳ ಗ್ರಿಡ್ ಸಂಪರ್ಕಿತ ಮೇಲ್ಛಾವಣಿ ಸೌರ ಘಟಕಗಳ ಪಿ.ವಿ ಸೌರ ಫಲಕಗಳು ಕಡ್ಡಾಯವಾಗಿ ಕಟ್ಟಡಗಳ ಮೇಲ್ಛಾವಣಿಯ ಮೇಲೆಯೇ ಅಳವಡಿಸಿಕೊಳ್ಳಬೇಕು.

3. ನೆಟ್ ಮೀಟರಿಂಗ್ ವ್ಯವಸ್ಥೆಯಡಿ, ಇನ್ನು ಮುಂದೆ ಒಡಂಬಡಿಕೆ ಮಾಡಿಕೊಳ್ಳುವ ಗ್ರಿಡ್ ಸಂಪರ್ಕಿತ ಮೇಲ್ಛಾವಣಿ ಸೌರಶಕ್ತಿ ಘಟಕಗಳ ಸಾಮರ್ಥ್ಯವು, ಅರ್ಜಿದಾರರು ತಮ್ಮ ಸ್ಥಾವರಕ್ಕೆ ಪಡೆದುಕೊಂಡಿರುವ ವಿದ್ಯುತ್ ಮಂಜೂರಾತಿ ಹೊರೆಯು ಸಾಮರ್ಥ್ಯ ಮೀರದಂತೆ (Limited to sanctioned load), ಮೇಲ್ಛಾವಣಿ ಸೌರ ವಿದ್ಯುತ್ ಘಟಕಗಳಿಗೆ ಒಡಂಬಡಿಕೆ ಮಾಡಿಕೊಳ್ಳುವುದು.

4. ಸರ್ಕಾರದ ಸುತ್ತೋಲೆ ಸಂಖ್ಯೆ: ಇಎನ್ 70 ವಿಎಸ್‌ಸಿ 2015 ದಿನಾಂಕ: 10.12.2015 ಅನ್ನು ಸರ್ಕಾರದ ಅಧಿಸೂಚನೆ ಸಂಖ್ಯೆ: ಇಎನ್ 70 ವಿಎಸ್‌ಸಿ 2015 ದಿನಾಂಕ: 23.03.2016 ರಲ್ಲಿ ಹಿಂಪಡೆದಿರುವುದನ್ನು ಈ ಮೂಲಕ ಸ್ಥಿರಿಕರಿಸಲಾಗಿದೆ.

5. ಈ ಆದೇಶವು ಕೆ.ಇ.ಆರ್.ಸಿ ರವರು ಹೊರಡಿಸುವ ಆದೇಶ/ನಿಬಂಧನೆಗಳಿಗೆ ಒಳಪಟ್ಟಿರುತ್ತದೆ.

ತಮ್ಮ ವಿಶ್ವಾಸಿ,

(ಸಿ.ನಟರಾಜ)
ಪ್ರಧಾನ ವ್ಯವಸ್ಥಾಪಕರು(ವಿ)
ಡಿ.ಎಸ್.ಎಂ, ಬೆವಿಕಂ

**ಪ್ರತಿಯನ್ನು ಗೌರವಪೂರ್ವಕ ಅವಗಾಹನೆ ಹಾಗೂ ಸೂಕ್ತ ಕ್ರಮಕ್ಕಾಗಿ ಸಲ್ಲಿಸಿದೆ:**

1. ಮುಖ್ಯ ಪ್ರಧಾನ ವ್ಯವಸ್ಥಾಪಕರು(ವಿ), (ನಿಗಮ ವ್ಯವಹಾರಗಳು), ನಿಗಮ ಕಾರ್ಯಾಲಯ, ಬೆವಿಕಂ, ಬೆಂಗಳೂರು.
2. ಮುಖ್ಯ ಇಂಜಿನಿಯರ್(ವಿ),ಬೆಂ.ಮ.ಕ್ಷೇ.ವ/ಬೆಂ.ಗ್ರಾ.ವ/ಚಿತ್ರದುರ್ಗ ವಲಯಗಳು, ಬೆವಿಕಂ, ಬೆಂಗಳೂರು.

**ಪ್ರತಿಯನ್ನು ಶುಭೇಚ್ಛೆಗಳೊಂದಿಗೆ ಅವಗಹಾನೆ ಹಾಗೂ ಕ್ರಮಕ್ಕಾಗಿ ಕಳುಹಿಸಿದೆ:**

3. ಎಲ್ಲಾ ಪ್ರಧಾನ ವ್ಯವಸ್ಥಾಪಕರು(ವಿ), ನಿಗಮ ಕಾರ್ಯಲಯ, ಬೆವಿಕಂ, ಬೆಂಗಳೂರು.
4. ಎಲ್ಲಾ ಅಧೀಕ್ಷಕ ಇಂಜಿನಿಯರ್(ವಿ), ಕಾರ್ಯ ಮತ್ತು ಪಾಲನಾ ವೃತ್ತಗಳು, ಬೆವಿಕಂ

**ಪ್ರತಿಯನ್ನು ಅಗತ್ಯಕ್ರಮಕ್ಕಾಗಿ ಕಳುಹಿಸಿದೆ:**

5. ಎಲ್ಲಾ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಕಾರ್ಯ ಮತ್ತು ಪಾಲನಾ ವೃತ್ತಗಳು, ಬೆವಿಕಂ
6. ಎಲ್ಲಾ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ),ಕಾರ್ಯ ಮತ್ತು ಪಾಲನಾ ವೃತ್ತಗಳು, ಬೆವಿಕಂ
7. ಆಪ್ತ ಕಾರ್ಯದರ್ಶಿಗಳು ವ್ಯ.ನಿ/ನಿ(ತಾಂ) ರವರ ಮಾಹಿತಿ ಹಾಗೂ ವ್ಯ.ನಿ/ನಿ(ತಾಂ) ರವರ ಗಮನಕ್ಕೆ ತರಲು ಕೋರಿದೆ.